# ಪ್ರತಿಕ್ರಿಯೆ




ರಾಮಮನೋಹರ ಲೋಹಿಯಾ
ಜೀವನಯಾನ

## ಲೇಖಕರ ಸಮಕಾಲೀನ ಜವಾಬ್ದಾರಿ

'ಡಾಕ್ಟರ್ ಸಾಹೇಬ್' ಬರೀ ಲೋಹಿಯಾ ಅವರ ಜೀವನಯಾನ ಆಗಿರಲಿಲ್ಲ. ಲೋಹಿಯಾ ಅವರ ಜೀವನ ಚರಿತ್ರೆ ಆಗುತ್ತಿರುವಂತೆಯೇ ಅದು ಜಾಗತಿಕ ಆಗುಹೋಗುಗಳ ಹಿನ್ನೆಲೆ ಮುನ್ನೆಲೆಗಳನ್ನು ಕಾಣಿಸಿದ, ವಿವರಿಸಿದ, ವಿಶ್ಲೇಷಿಸಿದ ಅಪರೂಪದ ಮಾದರಿಯಾಗಿಯೂ ಆಗಿ ತುಂಬ ಸಕಾಲಿಕಗೊಂಡಿತು. ಕೊನೆಯ ಸಂಚಿಕೆಯಲ್ಲಿ '... ಸಮಾಜವಾದಿಗಳ ಕಾಂಗ್ರೆಸ್ ವಿರೋಧಿ ರಾಜಕಾರಣದ ಅತಿಯಿಂದಾಗಿ ಕೋಮುವಾದಿಗಳಿಗೆ ಬಲ ಬಂದ ಕತೆ...' ಎಂಬ ಸಾಲು ಓದುತ್ತಿದ್ದಂತೆಯೇ ಲೇಖಕರ ಸಮಕಾಲೀನ ಜವಾಬ್ದಾರಿ ನೆನಪಿಗೆ ಬಂದು ಧನ್ಯವಾದ ಹೇಳಬೇಕೆನ್ನಿಸಿತು.

–ಹುರುಕಡ್ಲಿ ಶಿವಕುಮಾರ ಬಾಚಿಗೊಂಡನಹಳ್ಳಿ

## ಮತ್ತೆ ಕಳಿಸಿಕೊಡಿ ದೇವರೇ!

ಧಾರಾವಾಹಿ ಉತ್ತಮವಾಗಿ ಮೂಡಿಬಂತು. ಇಂದಿನ ರಾಜಕೀಯದಲ್ಲಿನ ಭ್ರಷ್ಟಾಚಾರ ಕಂಡು ಜನತೆಗೆ ರೋಸಿಹೋಗಿದೆ. ಇಂದು ನಮಗೆ ಅಂಬೇಡ್ಕರ್, ಜೆಪಿ ಮತ್ತು ರಾಮ ಮನೋಹರ ಲೋಹಿಯಾ ಅಂಥವರು ಬೇಕಾಗಿದೆ. ಅಂಬೇಡ್ಕರ್, ಜೆಪಿ ಮತ್ತು ಲೋಹಿಯಾರವರನ್ನು ಮತ್ತೆ ಕಳಿಸಿಕೊಡಿ ಎಂದು ದೇವರಲ್ಲಿ ಪ್ರಾರ್ಥನೆ.

–ಬಿದರಹಳ್ಳಿ ಚನ್ನವೀರಪ್ಪ ಹಿರೇಹಡಗಲಿ

## ಬಯೋಪಿಕ್ ಮಾಡಿದರೆ ಚೆನ್ನ

ಲೋಹಿಯಾ ಚಿಂತನೆ, ಲೋಹಿಯಾವಾದಿಗಳು, ಎಂಬ ಪದಗಳನ್ನು ಅಷ್ಟೇ ಕೇಳಿದ್ದ ನನಗೆ ಡಾಕ್ಟರ್ ಸಾಹೇಬ್ ರಾಮ ಮನೋಹರ ಲೋಹಿಯಾ ಅವರ ಜೀವನ ಯಾನದ ಸುದೀರ್ಘ ಧಾರಾವಾಹಿ ಓದಲು ಲಭಿಸಿದ ತೃಪ್ತಿ ಈಗ ಸಿಕ್ಕಿದೆ. ಇಂಥ ಮಹಾನುಭಾವರು ಭೌತಿಕವಾಗಿ ನಮ್ಮಿಂದ ಮರೆಯಾದರೂ ಇವರ ತತ್ವ, ಚಿಂತನೆ, ಸಿದ್ಧಾಂತಗಳು ಜನಮಾನಸದಿಂದ ಮರೆಯಾಗಲು ಸಾಧ್ಯವಿಲ್ಲ. ಲೋಹಿಯಾರ ಜೀವನಗಾಥೆಯನ್ನು 'ಬಯೋಪಿಕ್' ಮಾಡಿದರೆ ಇನ್ನೂ ಚೆನ್ನ.

–ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಸಮಯೋಚಿತ

ಧಾರಾವಾಹಿಯಲ್ಲಿ ಭಾರತದ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯಾ ನಂತರ ರಾಜಕೀಯದಲ್ಲಿ ಲೋಹಿಯಾ ಅವರ ಕೊಡುಗೆಯನ್ನು ಅತ್ಯಂತ ಯಶಸ್ವಿಯಾಗಿ ಚಿತ್ರಿಸಿದ್ದಾರೆ. ಪ್ರಸಕ್ತ ಅಸಮತೋಲನ ಸಮಾಜ ನಿರ್ಮಾಣವಾಗುತ್ತಿರುವ ಸನ್ನಿವೇಶದಲ್ಲಿ ಸಮತಾ ಸಮಾಜ ನಿರ್ಮಾಣ ಮಾಡಲು ಹೊರಟ ಹೋರಾಟಗಾರರ ಜೀವನ ಚರಿತ್ರೆ ಮತ್ತು ಅವರ ಕರ್ನಾಟಕದ ನಿಕಟ ಸಂಬಂಧವನ್ನು 'ಸುಧಾ' ಪರಿಚಯಿಸಿದ್ದು ಸಮಯೋಚಿತ.

–ಶಶಿಧರ ಎಲೆ

## ಸಹಜವಾಗಿ ಓದಿಸಿಕೊಳ್ಳುವ ಕಾದಂಬರಿ

ಸುದೀರ್ಘವಾದರೂ ಸಹಜವಾಗಿ ಓದಿಸಿಕೊಳ್ಳುವ ಜೀವಂತಿಕೆಗೆ ಎಲ್ಲಿಯೂ ಹೊರತಾಗದ ಈ ಪ್ರಯತ್ನಕ್ಕೆ ಮನಃಪೂರ್ವಕ ಅಭಿನಂದನೆಗಳು. ವಿಮರ್ಶಕ ಡಿ.ಆರ್. ನಾಗರಾಜ್ ಅವರೊಮ್ಮೆ 'ಕುವೆಂಪು ಕಲಾ ಸೃಷ್ಟಿ, ಲೋಹಿಯಾ ವಿಚಾರವಾದ ಹಾಗೂ ಕಾರಂತರ ಜೀವನ ದೃಷ್ಟಿ ಮತ್ತು ಬದುಕಿನಲ್ಲಿ ಕ್ರಿಯಾಶೀಲತೆ... ಈ ಮೂರೇ ಮುಂಬರುವ ಕನ್ನಡ ಲೇಖಕರಿಗೆ ಮಾರ್ಗದರ್ಶಿ ಎಂದಿದ್ದರು. ಅದು ಕೇವಲ ವ್ಯಕ್ತಿಗತ ಅಭಿಮತ ಮಾತ್ರವಲ್ಲ ವಸ್ತುತಃ ಸಾಧ್ಯತೆ ಎಂಬುದನ್ನು ಈ ಧಾರಾವಾಹಿಯ ಮೂಲಕ ಲೇಖಕರು ಸಾಕಾರಗೊಳಿಸಿದ್ದಾರೆ.

–ಶಂಕರ್ ಸೊರೊವನಹಳ್ಳಿ, ಮಾಯಸಂದ್ರ

## 60ರ ಸುಧಾಳಿಗೆ ಉಡುಗೊರೆ

ಈ ಧಾರಾವಾಹಿ ಒಂದು ಅಪೂರ್ವ ಕಥನ. ಇಂತಹ ಅಪರೂಪದ ಕಥನರೂಪದ ಇತಿಹಾಸವನ್ನು 60ರ ಹರೆಯದ 'ಸುಧಾ'ಳ ಮೂಲಕ ನಮಗೆ ಉಡುಗೊರೆಯಾಗಿ ನೀಡಿದ ಲೇಖಕರಿಗೆ ಧನ್ಯವಾದಗಳು.

–ವಸಂತ ಎಚ್.ಎಲ್.

## ಮನಮುಟ್ಟುವಂತಿದೆ

ಭಾರತೀಯ ರಾಜಕಾರಣದಲ್ಲಿ ಬಡ ಭಾರತೀಯನ ಬಗ್ಗೆ ಮಿಡಿದ ಒಬ್ಬ ಮಹೋನ್ನತ ವ್ಯಕ್ತಿತ್ವದ ಬಗ್ಗೆ 54 ವರ್ಷಗಳ ಹಿಂದೆ ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ ಆಗಾಗ ಕೇಳುತ್ತಿದ್ದೆ. ಆದರೆ ಅವರ ಬಗ್ಗೆ ನನಗೆ ಯಾವುದೇ ಹೆಚ್ಚಿನ ಮಾಹಿತಿ ಸಿಗಲಿಲ್ಲ. ಲೋಹಿಯಾ ಅವರ ಮೇರು ವ್ಯಕ್ತಿತ್ವವನ್ನು ಮನಮುಟ್ಟುವಂತೆ ತೆರೆದಿಟ್ಟ ಲೇಖಕರಿಗೆ ಹಾಗೂ ಪತ್ರಿಕೆಗೆ ವಂದನೆಗಳು.

–ರಾಜೀವ ಗೌಡ, ಕೋಟೋಡಿ, ವಿಟ್ಲ

## ಲೋಹಿಯಾ ಬಗ್ಗೆ ತಿಳಿದುಕೊಂಡೆ

ಲೋಹಿಯಾ ಜೀವನಕಥನ ತುಂಬಾ ಇಷ್ಟವಾಯಿತು. ಡಾಕ್ಟರ್ ಸಾಹೇಬ್ ಅವರು ಸರಳ, ಸಜ್ಜನ, ಹೆಣ್ಣುಮಕ್ಕಳ ಬಗ್ಗೆ ಗೌರವವಿರುವ ರಾಜಕೀಯ ಮುತ್ಸದ್ದಿ ಎಂಬುದು ಇಂದಿನ ರಾಜಕಾರಣಕ್ಕೆ ಮಾದರಿ ಆಗಬೇಕು. ಅವರ ಬಗ್ಗೆ ಬಹಳ ವಿಷಯಗಳು ತಿಳಿದುಕೊಂಡಂತಾಯಿತು.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ

## ಲೋಹಿಯಾ ಚಿಂತನೆ ಪ್ರೇರಕ

ಧಾರಾವಾಹಿ ಹಲವರಿಗೆ ಪ್ರೇರಕ ಮತ್ತು ಮಾರ್ಗದರ್ಶಕ. ವ್ಯಕ್ತಿಯ ಅಂತರ್ಗತ ನೈತಿಕತೆಯನ್ನು ಉಳಿಸಲು ಬೆಳೆಸಲು ಲೋಹಿಯಾ ಬದುಕು ಮತ್ತು ಚಿಂತನೆ ನಮಗೆ ದಾರಿದೀಪ. ಸಮಾಜವಾದಿ ಸಮಾಜದ ಆಚರಣೆ ದೃಷ್ಟಿಯಿಂದ ಲೋಹಿಯಾ ಚಿಂತನೆ ಕಣ್ಣುಗಳಿದ್ದ ಹಾಗೆ.

–ಗಂಗಾಧರ ಬಿ.ಎಂ., ಶಿರಾ,
ಗಂಗಾದೇವಿ ಬೆಂಗಳೂರು

## ಲೋಹಿಯಾ ವಿಚಾರಧಾರೆ ಅಚ್ಚರಿ

ಕಾದಂಬರಿ ಸೊಗಸಾಗಿ ಮೂಡಿಬಂತು. ಕೊನೆಯ ಕಂತು ಓದುತ್ತಿದ್ದಾಗ ಒಂದು ವಿಷಯ ನೆನಪಿಗೆ ಬಂತು. ಹಿರಿಯ ಸಮಾಜವಾದಿಗಳು ಮತ್ತು ಲೋಹಿಯಾ ಅವರ ಅನುಯಾಯಿಗಳಾದ ಜಾರ್ಜ್ ಫರ್ನಾಂಡಿಸ್ ಅವರು ಒಂದು ಸಭೆಯ ಭಾಷಣದಲ್ಲಿ ಬಸವಣ್ಣನವರ ವಿಚಾರಧಾರೆಯ ಬಗ್ಗೆ ತಿಳಿದುಕೊಂಡರು; ಅಷ್ಟೇ ಅಲ್ಲ ಲೋಹಿಯಾ ಅವರ ಸಮಾಜವಾದಿ ವಿಚಾರಧಾರೆಯೂ ಸಹ ಇದೇ ರೀತಿ ಇದೆಯಲ್ಲ ಎಂದು ತಿಳಿದು ಆಶ್ಚರ್ಯಪಟ್ಟರು. ಕರ್ನಾಟಕದವರೇ ಆಗಿದ್ದರೂ ಬಸವಣ್ಣನವರ ವಿಚಾರಧಾರೆ ಇಷ್ಟು ದಿವಸ ಗೊತ್ತಿರಲಿಲ್ಲವಲ್ಲ ಎಂದರು. ನಂತರ ಬಸವಣ್ಣನವರಿಗೆ ಸಂಬಂಧಪಟ್ಟ ಐತಿಹಾಸಿಕ ಸ್ಥಳಗಳಿಗೆ ಭೇಟಿ ಸಹ ಕೊಟ್ಟರು.

–ಎಂ. ಮಲ್ಲಿಕಾರ್ಜುನ, ಬೆಂಗಳೂರು

## ಬೇಗ ಮುಗಿಯಿತು

ಧಾರಾವಾಹಿ ಚೆನ್ನಾಗಿತ್ತು. ಯಾಕೆ ಇಷ್ಟು ಬೇಗ ಮುಗಿಯಿತು? ಲೇಖಕರ ಶೈಲಿ ಚೆನ್ನಾಗಿದೆ.

–ಕೃಷ್ಣ ಬದಾಮಿ

## ಧಾರಾವಾಹಿ ಸೊಗಸಾಗಿತ್ತು

ಧಾರಾವಾಹಿ ಸೊಗಸಾಗಿ ಮೂಡಿಬಂದಿದೆ. ನಾನೂ ಸಹ ಒಂದು ಕಾಲದಲ್ಲಿ ಸಮಾಜವಾದಿ ಯುವಜನ ಸಭಾ ಎನ್ನುವ ಸಂಘಟನೆಯಲ್ಲಿದ್ದು, ಕೆಲವು ಪ್ರಮುಖ ಕಾರ್ಯಗಳಲ್ಲಿ ಭಾಗವಹಿಸಿ ಲೋಹಿಯಾವಾದಿಗಳ ಸಹವಾಸದಲ್ಲಿದ್ದವನು. ಲೋಹಿಯಾರವರ ಪ್ರಮುಖ ಪುಸ್ತಕಗಳನ್ನೆಲ್ಲಾ ಓದಿದವನು, ಹಾಗೂ 'ಲೋಹಿಯಾ ವಿಚಾರಗಳ ಒಂದು ವಿಮರ್ಶೆ' ಎನ್ನುವ ಪುಸ್ತಕವನ್ನೂ ಬರೆದು ಪ್ರಕಟಿಸಿದವನು. ಗಾಂಧೀಜಿ, ಲೋಹಿಯಾ, ಜಯಪ್ರಕಾಶ ನಾರಾಯಣ ಮುಂತಾದವರು ಸ್ವಾರ್ಥರಹಿತರು. ಅವರೆಲ್ಲರ ಜನಪರ ಕಾಳಜಿಯ ಬಗ್ಗೆ ಎಳ್ಳಷ್ಟೂ ಅನುಮಾನವಿಲ್ಲ.

–ಯಡೂರ ಮಹಾಬಲ